ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.81/2025

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ ಎನ್.ಎಸ್ | ಸಿ.ಡಬ್ಲ್ಯೂ: 5 ಪಿ.ಡಬ್ಲ್ಯೂ: 4 |
| ತಂದೆಯ ಹೆಸರು | ಶ್ರೀನಿವಾಸ | |
| ವಯಸ್ಸು | 37 ವರ್ಷ | |
| ಉದ್ಯೋಗ | ಹೆಚ್.ಸಿ. ಗೋಣಿಬೀಡು ಪೊಲೀಸ್ ಠಾಣೆ | |
| ವಾಸ ಸ್ಥಳ | ಗೋಣಿಬೀಡು | |

ದಿನಾಂಕ: 15.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು ದಿ: 02.08.2024 ರಿಂದ ಇಲ್ಲಿಯವರೆಗೂ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ: 15.01.2025 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ಗೋಣಿಬೀಡು ಸರ್ಕಲ್ ನಲ್ಲಿ ಚಾಸಾ.1 ರಿಂದ 4 ರವರ ಜೊತೆ ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ ಗೋಣಿಬೀಡು ಪೊಲೀಸ್ ಠಾಣಾ ವ್ಯಾಪ್ತಿಯ ಗಾಡಿಚೌಕಾ ಗ್ರಾಮದ ವಾಸಿಯಾದ ಆರೋಪಿ ಹೊನ್ನೇಗೌಡ ಬಿನ್ ಜುಂಜೇಗೌಡ ಎಂಬುವವರು ತಮ್ಮ ವಾಸದ ಮನೆಯ ಮುಂಭಾಗ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ.1 ರವರಿಗೆ ದೂರವಾಣಿ ಕರೆ ಬಂದಿದ್ದು, ಸಂಜೆ 6.20 ರ ಸುಮಾರಿಗೆ ಗಾಡಿಚೌಕಾ ಗ್ರಾಮಕ್ಕೆ ನಾವುಗಳು ಹೋಗಿದ್ದು ರಸ್ತೆಯ ಬದಿಯಲ್ಲಿ ಮಾತನಾಡುತ್ತಾ ನಿಂತಿದ್ದ ಚಾಸಾ.6 ಮತ್ತು 7 ರವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ಚಾಸಾ.1 ರವರು ತಿಳಿಸಿ ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅವರು ಒಪ್ಪಿದ ಮೇರೆಗೆ ಅವರಿಗೆ ಚಾಸಾ.1 ರವರು ನೋಟೀಸು ನೀಡಿ ಇಲಾಖಾ ಜೀಪಿನಲ್ಲಿ ಅವರನ್ನು ಕರೆದುಕೊಂಡು 6.30 ಗಂಟೆಗೆ ಗಾಡಿಚೌಕಾ ಗ್ರಾಮದ ಆರೋಪಿಯ ಮನೆಯ ಬಳಿ ಹೋಗಿ ನೋಡಲಾಗಿ ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್

ಚೀಲದಲ್ಲಿ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುವುದು ಕಂಡು ಬಂದಿದ್ದು, ದಾಳಿ ಮಾಡಿದಾಗ ಆರೋಪಿ ಅಲ್ಲಿಯೇ ಬಿಳಿ ಚೀಲವನ್ನು ಬಿಟ್ಟು ಹೋಗಿದ್ದು, ಓಡಿ ಹೋದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಪಂಚರ ಬಳಿ ಕೇಳಲಾಗಿ ಆತನ ಹೆಸರು ಹೊನ್ನೇಗೌಡ ಬಿನ್ ಜುಂಜೇಗೌಡ ಎಂದು ತಿಳಿದು ಬಂತು. ನಂತರ ಆರೋಪಿಯು ಬಿಟ್ಟು ಹೋಗಿದ್ದ ಬಿಳಿ ಬಣ್ಣದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ Original Choice Deluxe Whiskey Company 90 ಎಂ.ಎಲ್ ನ ಒಟ್ಟು 53 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿದ್ದವು. ನಿಗಧಿತಿ ಮಿತಿಗಿಂತ ಹೆಚ್ಚಿನ ಮದ್ಯವನ್ನು ಆರೋಪಿ ಇಟ್ಟುಕೊಂಡಿದ್ದು ಕಂಡು ಬಂತು. ನಂತರ ಸ್ಥಳದಲ್ಲಿಯೇ ವರದಿಯನ್ನು 6.40 ರಿಂದ 7.00 ರವರೆಗೆ ಚಾಸಾ.1 ರವರು ತಯಾರಿಸಿ ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿ ಇದ್ದ ಎ.ಎಸ್.ಐ ಚಾಸಾ.12 ರವರಿಗೆ ಪ್ರಕರಣ ದಾಖಲಿಸುವಂತೆ ಸೂಚಿಸಿದ್ದು ಸದರಿ ವರದಿಯನ್ನು ಚಾಸಾ.2 ರವರ ಹಸ್ತಾ ಠಾಣೆಗೆ ಕಳುಹಿಸಿಕೊಟ್ಟಿದ್ದರು. ನಂತರ ಪ್ರಕರಣ ದಾಖಲಾದ ಬಗ್ಗೆ ಚಾಸಾ.12 ರವರು ಪ್ರಕರಣ ದಾಖಲು ಮಾಡಿದ ಬಗ್ಗೆ ಚಾಸಾ.1 ರವರಿಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ತಕ್ಷೀರು ಸ್ಥಳದಲ್ಲಿ ಮಹಜರ್ ಕ್ರಮವನ್ನು 7.25 ರಿಂದ 08.25 ಗಂಟೆ ವರೆಗೆ ಮಹಜರ್ ನ್ನು ಚಾಸಾ.1 ರವರು ಜರುಗಿಸಿರುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ವಶಕ್ಕೆ ಪಡೆದಿರುವ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಬಿಳಿ ಚೀಲದಲ್ಲಿ ಹಾಕಿ 'ಪಿ' ಎಂಬ ಅರಗು ಸೀಲು ಹಾಕಿ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ಠಾಣೆಗೆ ವಶಪಡಿಸಿಕೊಂಡ ಮಾಲುಗಳ ಸಮೇತ ಬಂದಿರುತ್ತೇವೆ.

3. ನಿ.ಪಿ.3 ಸ್ಥಳ ಮಹಜರ್ ಮತ್ತು ಕರಡು ನಕ್ಷೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಲ್ಲಿ ಇರುವ ಸಹಿಯನ್ನು ನಿ.ಪಿ.3(ಡಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿ.ಪಿ.4 ಛಾಯಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ಅನ್ನು ಮತ್ತು ಆರೋಪಿಯನ್ನು ಸಾಕ್ಷಿ ನೋಡಿ

ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಶ್ರೀ ಎ.ಆರ್. ವಕೀಲರಿಂದ ಶ್ರೀ ಹೆಚ್.ಕೆ.ಡಿ ವಕೀಲ ಪರವಾಗಿ – ಆರೋಪಿ ಪರವಾಗಿ</u>

4. ಆ ದಿನ ಸಂಜೆ 4 ರಿಂದ 6 ರವರೆಗೂ ಗೋಣಿಬೀಡು, ಮರೆಬೈಲು, ಕಸ್ಕೇಬೈಲು, ಆನೆದಿಬ್ಬ ಗಳಲ್ಲಿ ಗಸ್ತು ಕಾರ್ಯ ಮಾಡಿದ್ದೆವು. ಗಾಡಿಚೌಕ ಗ್ರಾಮದ ರಸ್ತೆಯ ಬಳಿ ಚಾಸಾ.6 ಮತ್ತು 7 ಸಿಕ್ಕಿದ್ದರು. ಚಾಸಾ.6 ಮತ್ತು 7 ರವರಿಗೆ ನೋಟೀಸು ಜಾರಿ ಮಾಡಲು 10 ನಿಮಿಷ ಸಮಯವನ್ನು ಚಾಸಾ.1 ರವರು ತೆಗೆದುಕೊಂಡಿದ್ದರು. ಆರೋಪಿಯನ್ನು 20 ಮೀಟರ್ ಅಂತರದಿಂದ ನೋಡಿದ್ದೆವು. ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದೆವು. ಆರೋಪಿಗೆ 70 ವರ್ಷ ಪ್ರಾಯ ಆಗಿದೆ ಎಂದರೆ ಸಾಕ್ಷಿ 62 ವರ್ಷ ಎಂದು ನುಡಿಯುತ್ತಾರೆ. Original Choice Deluxe Whiskey ಯ ಚೀಲ ಆರೋಪಿಯ ಮನೆಯ ಮುಂದೆ ಇತ್ತು. ಸದರಿ ಮುದ್ದೆ ಮಾಲನ್ನು ನಾವುಗಳು ಪತ್ತೆ ಹಚ್ಚಿದೆವು. ಆ ಸಮಯದಲ್ಲಿ ಪಂಚರು ಇದ್ದರು. ಮುದ್ದೆ ಮಾಲುಗಳೊಂದಿಗೆ ಪಂಚರ ಛಾಯಚಿತ್ರವನ್ನು ತೆಗೆಸಿದ್ದರು.

5. ಪಂಚರನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ದಿಃ 15.01.2025 ರಂದು ನಾವು ಸಂಜೆ 4.00 ರಿಂದ 6.00 ರವರೆಗೆ ಗಸ್ತು ಕಾರ್ಯ ಮಾಡುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಅನಾಮದೇಯ ವಸ್ತುಗಳನ್ನು ಇಟ್ಟುಕೊಂಡು ಸುಳ್ಳು ಪ್ರಕರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. Original Choice Deluxe Whiskey Company ಯ ಟೆಟ್ರಾ ಪ್ಯಾಕ್ ಗಳು ಎಲ್ಲಾ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ